**ಪಾಠ–1** **ಡಿಸೆಂಬರ್ 29–ಜನವರಿ 4**

# ಪತ್ಮೋಸ್‌ನಿಂದ್ ಸುವಾರ್ತೆ



**ಸಬ್ಬತ್ತಿನ ಮಧ್ಯಾಹ್ನ :** ಈ ವಾರದ ಪಾಠದ ಅಧ್ಯಯನಕ್ಕಾಗಿ ಪ್ರಕಟನೆ 1:1–8; ಯೋಹಾನ 14:1–3; ಧರ್ಮೋಪದೇಶಕಾಂಡ 29:29; ಯೋಹಾನ 14:29; ರೋಮಾಪುರದವರಿಗೆ 1:7; ಫಿಲಿಪ್ಪಿಯವರಿಗೆ 3:20; ದಾನಿಯೇಲ 7:13, 14.

**ಸ್ಮರಣವಾಕ್ಯ : ಈ ಪ್ರವಾದನ ವಾಕ್ಯಗಳನ್ನು ಓದುವಂಥವನೂ ಕೇಳುವಂಥವರೂ ಈ ಪ್ರವಾದನೆಯಲ್ಲಿ ಬರೆದಿರುವ ಮಾತುಗಳನ್ನು ಕೈಕೊಂಡು ನಡೆಯುವಂಥವರೂ ಧನ್ಯರು. ಅವು ನೆರವೇರುವ ಸಮಯವು ಸಮೀಪವಾಗಿದೆ (ಪ್ರಕಟನೆ 1:3).**

ಹತ್ತೊಂಬತ್ತನೇ ಶತಮಾನಕ್ಕೂ ಮುಂಚೆಯೇ ಅಪೋಸ್ತಲನಾದ ಯೋಹಾನನು ಏಜೀಯನ್ ಸಮುದ್ರದಲ್ಲಿ ಸಣ್ಣ ಶಿಲೆ ದ್ವೀಪವೆಂದು ಕರೆಯಲ್ಪಡುವ ಪತ್ಮೋಸ್‌ನಲ್ಲಿ ಗಡಿಪಾರದವನಾಗಿ ಇರುವ ಸಮಯದಲ್ಲಿ ಪ್ರಕಟನೆ ಗ್ರಂಥದ ಪ್ರವಾದನೆಗಳು ಆತನಿಗೆ ದರ್ಶನದಲ್ಲಿ ಪ್ರಕಟಿಸಲ್ಪಟ್ಟವು (ಪ್ರಕಟನೆ 1:9). ಈ ಪ್ರವಾದನ ವಾಕ್ಯಗಳನ್ನು ಓದುವಂಥವನೂ ಕೇಳುವಂಥವರೂ ಈ ಪ್ರವಾದನೆಯಲ್ಲಿ ಬರೆದಿರುವ ಮಾತುಗಳನ್ನು ಕೈಕೊಂಡು ನಡೆಯುವಂಥವರೂ ಧನ್ಯರು ಎಂದು ಪ್ರಕಟನೆ 1:3 ಘೋಷಿಸುತ್ತದೆ. (ಲೂಕ 6:47, 48 ಹೋಲಿಸಿ ನೋಡಿ). ಈ ವಾಕ್ಯವು ಸಂದೇಶವನ್ನು ಕೇಳಲು ದೇವಾಲಯದಲ್ಲಿ ಕೂಡಿ ಬಂದಿರುವ ಸಭಾ ಸಮೂಹವನ್ನು

ಉಲ್ಲೇಖಿಸುತ್ತದೆ. ಏನೇ ಆದರೂ, ಅವರು ಧನ್ಯರಾಗಿರುವುದು ಓದಿದ ಅಥವಾ ಕೇಳಿಸಿಕೊಂಡ ಮಾತ್ರಕಲ್ಲದೆ ಅವರು ಈ ಪುಸ್ತಕದ ವಾಕ್ಯಕ್ಕೆ ವಿಧೇಯರು ಆಗಿದ್ದರಿಂದಲೇ (ಪ್ರಕಟನೆ 22:7).

ಪ್ರಕಟನೆಯ ಪ್ರವಾದನೆಗಳು ದೇವರು ಆತನ ಜನರ ಮೇಲೆ ಇರುವ ಕಾಳಜಿಯ ಭಾವನೆಯಾಗಿದೆ. ಅವು ನಮ್ಮ ಈ ಜೀವನದ ನಾಜೂಕತನ ಮತ್ತು ಕೊರತೆಯ ಬಗ್ಗೆಯೂ, ರಕ್ಷಣೆಗಾಗಿ ಯೇಸುವನ್ನು ಮತ್ತು ಆತನ ಪರಲೋಕದ ಮಹಾಯಾಜಕ ವೃತ್ತಿಯನ್ನು ಮತ್ತು ರಾಜತನ ಹಾಗೂ ನಾವು ಸುವಾರ್ತೆಯನ್ನು ಸಾರುವ ಕರೆಯ ಬಗ್ಗೆಯೂ ಗಮನ ಸೆಳೆಯುತ್ತದೆ.

ಸತ್ಯವೇದದ ಪ್ರವಾದನೆಗಳು ಕತ್ತಲೆಯ ಸ್ಥಳದಲ್ಲಿ ಮಾರ್ಗದರ್ಶನ ನೀಡುವ ಬೆಳಗುವ ದೀಪದಂತೆ ಇದೆ (2 ಪೇತ್ರ 1:9). ಅವು ಇಂದು ನಮ್ಮ ಜೀವನಕ್ಕೆ ಮಾರ್ಗದರ್ಶನ ನೀಡಲು ಮತ್ತು ಭವಿಷ್ಯದ ಬಗ್ಗೆ ಭರವಸೆಯನ್ನು ಮೂಡಿಸುತ್ತದೆ. ಕ್ರಿಸ್ತನ ಬರೋಣ ಮತ್ತು ದೇವರು ಶಾಶ್ವತ (ನಿತ್ಯ) ರಾಜ್ಯವನ್ನು ಸ್ಥಾಪಿಸುವವರೆಗೂ ನಮಗೆ ಈ ಪ್ರವಾದನ ಮಾರ್ಗದರ್ಶಿ ಅಗತ್ಯವಿರುತ್ತದೆ.

**ಜನವರಿ 5 ರ ಸಬ್ಬತಿನ ಸಿದ್ಧತೆಗೆ ಈ ವಾರದ ಪಾಠವನ್ನು ಅಧ್ಯಯನ ಮಾಡಿ.**

**ಭಾನುವಾರ** **ಡಿಸೆಂಬರ್, 30**

## ಪುಸ್ತಕದ ಶಿರೋನಾಮೆ

ಪ್ರಕಟನೆ 1:1, 2 ಓದಿ. ಪುಸ್ತಕದ ಸಂಪೂರ್ಣ ಶಿರೋನಾಮೆ ಪ್ರಾಮುಖ್ಯತೆ ಏನು? ಈ ಪುಸ್ತಕವು ನಿಜವಾಗಿಯೂ ಯಾರ ವಿಷಯದಲ್ಲಿದೆ ಎಂದು ಈ ಶೀರ್ಷಿಕೆ ನಮಗೇನು ಕಲಿಸುತ್ತದೆ?

ಈ ಪುಸ್ತಕದ ಶಿರೋನಾಮೆಯು "ಯೇಸುಕ್ರಿಸ್ತನ ಪ್ರಕಟನೆ" ಎಂದು ಪ್ರಕಟನೆ 1:1 ಹೇಳುತ್ತದೆ. "ಪ್ರಕಟನೆ" ಎಂಬ ಪದವು ಅಪೋಕ್ಯಾಲಿಪ್ಸ್ ಎಂಬ ಗ್ರೀಕ್ ಪದದಿಂದ ಬಂದಿದೆ ಇದರ ಅರ್ಥ "ಬಹಿರಂಗ ಪಡಿಸುವುದು ಅಥವಾ "ಅನಾವರಣಗೊಳಿಸುವುದು". ಪ್ರಕಟಣೆಯು ಯೇಸುಕ್ರಿಸ್ತನನ್ನು ಅನಾವರಣಗೊಳಿಸುತ್ತದೆ; ಇವೆರಡು ಕ್ರಿಸ್ತನಿಂದ ಮತ್ತು ಆತನಿಗಾಗಿ ಇದೆ. ಇದು

ದೇವರಿಂದ ಯೇಸುಕ್ರಿಸ್ತನ ಮೂಲಕ ಬಂದಿತು (ಪ್ರಕಟನೆ 22:16 ನೋಡಿ). ಈ ಪುಸ್ತಕವು ಯೇಸುವೇ ಅದರ ವಿಷಯಗಳ ಕೇಂದ್ರಬಿಂದು ಎಂದು ಸಾಕ್ಷಿ ಕೊಡುತ್ತದೆ. ಪ್ರಕಟನೆಯು ಅವನ ಜನರಿಗೆ ಆತನ ಸ್ವ-ಪ್ರಕಟನೆಯಾಗಿದೆ ಮತ್ತು ಅವರ ಬಗ್ಗೆ ಆತನಿಗಿರುವ ಕಾಳಜಿಯ ಭಾವವನ್ನು ತೋರಿಸುತ್ತದೆ.

ಯೇಸು ಪ್ರಕಟನೆ ಪುಸ್ತಕದ ಕೇಂದ್ರಬಿಂದು ಆಗಿದ್ದಾನೆ. ಈ ಪುಸ್ತಕವು ಆತನೊಂದಿಗೆ ಪ್ರಾರಂಭವಾಗುತ್ತದೆ (ಪ್ರಕಟನೆ 1:5–8) ಮತ್ತು ಆತನೊಂದಿಗೆ ಅಂತ್ಯವಾಗುತ್ತದೆ (ಪ್ರಕಟನೆ 22:12–16). "ದಾನಿಯೇಲನು ಮಾತನಾಡಲಿ, ಪ್ರಕಟನೆ ಮಾತನಾಡಲಿ ಮತ್ತು ಸತ್ಯ ಏನೆಂದು ಹೇಳಲಿ. ಯಾವುದೇ ಹಂತದ ವಿಷಯವನ್ನು ಪ್ರಸ್ತುತ ಪಡಿಸಿದರು, ಯೇಸುವೇ ಎಲ್ಲಾ ಭರವಸೆಯ ಕೇಂದ್ರವೆಂದು, ದಾವೀದನ ಮೂಲಸಂತಾನವೆಂದು ಮತ್ತು ಪ್ರಕಾಶಮಾನ ಬೆಳಗಿನ ನಕ್ಷತ್ರವೆಂದು ಏಳಿಗೆ ಪಡಿಸಿರಿ" – ಶ್ರೀಮತಿ ಎಲೆನ್ ಜಿ ವೈಟಮ್ಮನವರು, ಟೆಸ್ಟಿಮೋನಿ ಟೂ ಮಿನಿಸ್ಟರ್ಸ್ ಅಂಡ್ ಗಾಸ್ಪೆಲ್ ವರ್ಕರ್ಸ್, ಪುಟ 118.

ಅಲ್ಲದೆ, ನಾಲ್ಕು ಸುವಾರ್ತೆಗಳ ಯೇಸುವೇ ಪ್ರಕಟನೆಯ ಯೇಸು ಆಗಿದ್ದಾರೆ. ಸುವಾರ್ತೆಗಳಲ್ಲಿ ಮೊದಲೇ ಚಿತ್ರಿಸಿದಂತೆ ಯೇಸು ಆತನ ಜನರ ಪರವಾಗಿ ಮಾಡುವ ರಕ್ಷಣೆ ಕಾರ್ಯದ ವಿವರಣೆಯನ್ನು ಮುಂದುವರಿಸಿದೆ. ಪ್ರಕಟನೆ ಪುಸ್ತಕವು ಆತನ ಅಸ್ತಿತ್ವ ಮತ್ತು ಸೇವೆಯ ವಿವರ ಅಂಶಗಳನ್ನು ಕೇಂದ್ರೀಕರಿಸುತ್ತದೆ. ಮೂಲಭೂತವಾಗಿ, ಸುವಾರ್ತೆಗಳು ಎಲ್ಲಿ ಮುಕ್ತಾಯಗೊಳ್ಳುತ್ತವೆಯೋ ಅಲ್ಲಿಂದ ಯೇಸುವಿನ ಪುನರುತ್ಥಾನ ಮತ್ತು ಪರಲೋಕಕ್ಕೆ ಆರೋಹಣ ಮೊದಲಾದವುಗಳು ಪ್ರಾರಂಭವಾಗುತ್ತದೆ.

ಇಬ್ರಿಯರಿಗೆ ಬರೆದ ಪತ್ರಿಕೆಯೊಂದಿಗೆ ಪ್ರಕಟನೆಯು ಯೇಸುವಿನ ಪರಲೋಕ ಸೇವೆಗೆ ಒತ್ತು ನೀಡುತ್ತದೆ. ಆತನ ಆರೋಹಣದ ನಂತರ ಯೇಸು ಪರಲೋಕದ ಯಾಜಕ ಸೇವೆ ಮತ್ತು ಆತನ ರಾಜ ವೈಭವವನ್ನು ಉದ್ಘಾಟಿಸಿದರು ಎಂದು ತೋರಿಸುತ್ತದೆ. ಪ್ರಕಟನೆ ಮತ್ತು ಇಬ್ರಿಯರಿಗೆ ಬರೆದ ಪತ್ರಿಕೆ ಇಲ್ಲದೆ ಕ್ರಿಸ್ತನ ಪರಲೋಕದಲ್ಲಿ ಮಹಾಯಾಜಕನಾಗಿ ಜನಪರವಾಗಿ ಸಲ್ಲಿಸುವ ಸೇವೆಯ ಕುರಿತು ನಮ್ಮ ಜ್ಞಾನವು ಬಹಳ ಸೀಮಿತವಾಗಿರುತ್ತದೆ ಮತ್ತು ಇಬ್ರಿಯರಿಗೆ ಬರೆದ

ಪತ್ರಿಕೆಯ ಹೊರತಾಗಿ, ಪ್ರಕಟನೆಯ ವಿಶೇಷ ಗಮನವು ಯೇಸುಕ್ರಿಸ್ತನು ನಮ್ಮ ಪರವಾಗಿ ಮಾಡುವ ಸೇವೆಯನ್ನು ನಮಗೆ ಒದಗಿಸುತ್ತದೆ.

**ಯೋಹಾನ 14:1–3 ಓದಿ. ಯೇಸು ಪರಲೋಕದಲ್ಲಿ ಈಗ ನಮಗೇನು ಮಾಡುತ್ತಿದ್ದಾರೆ ಎಂಬುದನ್ನು ಚೆನ್ನಾಗಿ ಅರ್ಥಮಾಡಿಕೊಳ್ಳಲು ಈ ಬಹಳ ವಿಶಾಲವಾದ ಭರವಸೆಯು ನಮಗೆ ಹೇಗೆ ಸಹಾಯ ಮಾಡುತ್ತದೆ? ಈ ಅದ್ಭುತ ವಿಶ್ವಾಸದಿಂದ ನಾವು ಯಾವ ಭರವಸೆ ಪಡೆಯಬಹುದು?**

**ಸೋಮವಾರ** **ಡಿಸೆಂಬರ್, 31**

## ಪುಸ್ತಕದ ಉದ್ದೇಶ

ಈ ಪುಸ್ತಕವು ಸ್ವತಃ ಬರೆಯಲ್ಪಟ್ಟ ಸಮಯದಿಂದ ಪ್ರಾರಂಭವಾಗುವುದು, ಈ ಪುಸ್ತಕದ ಉದ್ದೇಶವು ಭವಿಷ್ಯದ ಘಟನೆಗಳನ್ನು ತೋರಿಸುವುದು ಸಹ ಆಗಿದೆಯೆಂದು ಪ್ರಕಟನೆ 1:1 ರಲ್ಲಿ ಹೇಳುತ್ತದೆ. ಪ್ರಕಟನೆಯನ್ನು ಬಹುಬಳಕೆ ಮಾಡುವ ಯಾವನಾದರೂ ಭವಿಷ್ಯ ಕಾಲದ ಘಟನೆಗಳನ್ನು ಗಮನಿಸಿದರೆ – ಈಗಾಗಲೇ ಅವುಗಳು ನೆರವೇರಿದೆಯಾ (ಕನಿಷ್ಠ ನಮ್ಮ ದೃಷ್ಟಿಕೋನದಿಂದ) ಅಥವಾ ಆ ಘಟನೆಗಳು ಇನ್ನೂ ಭವಿಷ್ಯದಲ್ಲಿಯೂ (ಮತ್ತೆ, ಈಗಿನ ನಮ್ಮ ದೃಷ್ಟಿಕೋನದಿಂದ) ಈ ವಿಷಯ ಪುಸ್ತಕದ ಅನೇಕ ಭಾಗವಾಗಿ ವ್ಯಾಪಿಸಿದೆ.

ಸತ್ಯವೇದದ ಪ್ರವಾದನೆಗಳ ಪ್ರಾಥಮಿಕ ಉದ್ದೇಶವೆಂದರೆ ಭವಿಷ್ಯವು ಏನು ತರುತ್ತದೋ ಏನೋ, ದೇವರು ನಿಯಂತ್ರಣದಲ್ಲಿರುತ್ತಾನೆ ಎಂದು ನಮಗೆ ದೃಢಪಡಿಸುತ್ತದೆ. ಪ್ರಕಟನೆ ಅದನ್ನೇ ತಾನೇ ಮಾಡುತ್ತದೆ. ಯೇಸುಕ್ರಿಸ್ತನು ತನ್ನ ಜನರೊಂದಿಗೆ ಈ ಪ್ರಪಂಚದ ಇತಿಹಾಸದುದ್ದಕ್ಕೂ ಇದ್ದಾನೆಂದು ಅದು ಭರವಸೆ ಕೊಡುತ್ತದೆ ಮತ್ತು ಅದರ ಅಂತಿಮ ಘಟನೆಗಳೂ ಭಯಜನಕವಾಗುವುದು.

ಪರಿಣಾಮವಾಗಿ, ಪ್ರಕಟನೆಯ ಪ್ರವಾದನೆಗಳು ಎರಡು ಪ್ರಾಯೋಗಿಕ ಉದ್ದೇಶಗಳನ್ನು ಹೊಂದಿದೆ : ಇಂದು ನಾವು ಹೇಗೆ ಬದುಕಬೇಕೆಂದು ಕಲಿಸುತ್ತದೆ ಮತ್ತು ಭವಿಷ್ಯಕ್ಕೆ ನಮ್ಮನ್ನು ಸಿದ್ಧಗೊಳಿಸುತ್ತದೆ. ಧರ್ಮೋಪದೇಶಕಾಂಡ 28:29 ಓದಿರಿ. ಕೆಲವು ವಿಷಯಗಳು ನಮಗೆ ಬಹಿರಂಗವಾಗಿಲ್ಲ ಏಕೆಂದು ಅರ್ಥ

ಮಾಡಿಕೊಳ್ಳಲು ಈ ವಾಕ್ಯವು ನಮಗೆ ಹೇಗೆ ಸಹಾಯ ಮಾಡುತ್ತದೆ? ಈ ವಾಕ್ಯದ ಪ್ರಕಾರ, ನಮಗೆ ತಿಳಿಯಲ್ಪಟ್ಟ ವಿಷಯಗಳ ಉದ್ದೇಶವೇನು? ಅಂದರೆ ನಾವು ಅವರಿಗೆ ಏಕೆ ಹೇಳಿದೆವು? ಪ್ರಕಟ 22:7 ಸಹ ನೋಡಿ.

ಭವಿಷ್ಯದ ಬಗ್ಗೆ ನಮಗೆ ಕಾಡುವ ಕುತೂಹಲವನ್ನು ತೃಪ್ತಿಗೊಳಿಸಲು ಪ್ರಕಟನೆಯ ಕೊನೆ ಕಾಲದ ಪ್ರವಾದನೆಗಳು ಬಹಿರಂಗವಾಗಿಲ್ಲ. ನಮಗೆ ತಿಳಿಯಲು ಭವಿಷ್ಯದ ಪ್ರಮುಖ ಅಂಶಗಳನ್ನು ಮಾತ್ರ ಈ ಪುಸ್ತಕವು ಬಹಿರಂಗಪಡಿಸುತ್ತದೆ. ಏನಾಗುವುದೆಂಬ ಗಂಭೀರತೆಯನ್ನು ನಮ್ಮ ಮೇಲೆ ಪ್ರಭಾವ ಬೀರಲು ಅವುಗಳನ್ನು ಬಹಿರಂಗಪಡಿಸಲಾಗಿದೆ. ಆದ್ದರಿಂದ ನಾವು ದೇವರ ಮೇಲೆ ನಮ್ಮ ಅವಲಂಬನೆಯನ್ನು ಅರಿತುಕೊಳ್ಳುತ್ತೇವೆ ಮತ್ತು ಆ ಅವಲಂಬನೆಯಿಂದ ಆತನಿಗೆ ವಿಧೇಯರಾಗುತ್ತೇವೆ.

ಶತಮಾನಗಳವರೆಗೆ, ಊಹಾಪೋಹಗಳು ಮತ್ತು ಇನ್ನಷ್ಟು ಭಾವನ ಮೂಲ ಸಿದ್ಧಾಂತಗಳು ಕೊನೆ ಕಾಲದ ಘಟನೆಗಳ ಬೋಧನೆ ಜೊತೆ ಇರುತ್ತವೆ. ತಕ್ಷಣದ ಅಂತ್ಯವನ್ನು ಊಹಿಸುವವರ ದೆಸೆಯಿಂದ ಜನರು ಅವರ ಸೇವೆಗೆ ಹಣ ನೀಡಲು ಹೆದರುತ್ತಿದ್ದಾರೆ. ಯಾಕೆಂದರೆ, ಅಂತ್ಯವು ಸಮೀಪಿಸಿದೆ. ಆದರೆ, ಪ್ರತಿಬಾರಿ ಅಂತ್ಯವು ಬರಲಿಲ್ಲ ಮತ್ತು ಜನರು ಭ್ರಮೆಗೊಳಗಾದರು ಮತ್ತು ಕುಗ್ಗಿಸಲ್ಪಟ್ಟರು. ದೇವರು ನಮಗೆ ಕೊಟ್ಟಿರುವ ಎಲ್ಲಾ ಒಳ್ಳೆ ಸಂಗತಿಗಳ ಜೊತೆಗೆ ಪ್ರವಾದನೆಯನ್ನು ಕೂಡ ದುರುಪಯೋಗಪಡಿಸಬಹುದು ಮತ್ತು ತಪ್ಪಾಗಿ ಅರ್ಥೈಸಬಹುದು.

**ಯೋಹಾನ 14:29 ಓದಿ. ಪ್ರವಾದನೆಯ ಉದ್ದೇಶಕ್ಕಾಗಿ ಯಾವ ಪ್ರಮುಖ ನಿರ್ಣಾಯಕ ಮೂಲ ತತ್ವವನ್ನು ನಾವು ಈ ವಾಕ್ಯದಲ್ಲಿ ಕಾಣಬಹುದು?**

**ಮಂಗಳವಾರ** **ಜನವರಿ, 1**

## ಪ್ರಕಟನೆಯ ಸಾಂಕೇತಿಕ ಭಾಷೆ

ಪ್ರಕಟನೆ 13:1; ದಾನಿಯೇಲ 7:1– ಮತ್ತು ಯೆಹೆಜ್ಕೇಲನು 1:1–14; ಯಾವ ಒಂದು ಅಂಶ ಈ ದರ್ಶನಗಳಲ್ಲಿ ಸಾಮಾನ್ಯವಾಗಿದೆ?

ಪ್ರಕಟನೆ 1:1 ಮತ್ತಷ್ಟು ಹೇಳುತ್ತದೆ : "ಇದಲ್ಲದೆ ಆತನು ತನ್ನ ದೂತನನ್ನು

ಕಳುಹಿಸಿ ಅವನ ಮೂಲಕ ಆ ಸಂಗತಿಗಳನ್ನು ತನ್ನ ದಾಸನಾದ ಯೋಹಾನನಿಗೆ ಸೂಚಿಸಿದನು. ಇಲ್ಲಿ ನಾವು ಈ ಪುಸ್ತಕದ ಬಹಳ ಮುಖ್ಯವಾದ ಪದವನ್ನು ಕಂಡುಕೊಳ್ಳುತ್ತೇವೆ. "ಸೂಚಿಸಿದ" (ಸಿಗ್ನಿಫೈಡ್) ಎಂಬ ಪದ "ಸೆಮೈನೋ' ಎಂಬ ಗ್ರೀಕ್ ಪದದ ಅನುವಾದವಾಗಿದೆ. ಇದರರ್ಥ "ಸಾಂಕೇತಿಕ ಚಿಹ್ನೆಗಳಿಂದ ತೋರಿಸಲ್ಪಟ್ಟಿದೆ". ದಾನಿಯೇಲನು ನೆಬೂಕದ್ನೆಚ್ಚರ್ ರಾಜನಿಗೆ ವಿವರಿಸಿದ ಹಳೆ ಒಡಂಬಡಿಕೆ (ಸೆಪ್ಟುಜೆಂಟ್) ಈ ಪದವು ಗ್ರೀಕ್ ಅನುವಾದದಲ್ಲಿ ಬಳಸಲಾಗಿದೆ. ಚಿನ್ನ, ಬೆಳ್ಳಿ, ಕಂಚಿನ ಮತ್ತು ಕಬ್ಬಿಣದಿಂದ ಮಾಡಿದ ಆ ಪ್ರತಿಮೆಯನ್ನು ದೇವರು ರಾಜನಿಗೆ "ಭವಿಷ್ಯದಲ್ಲಿ ಏನು ನಡೆಯುತ್ತದೆ" ಎಂದು ಸೂಚಿಸುತ್ತಾನೆ (ದಾನಿಯೇಲ 2:45). ಅದೇ ಪದವನ್ನು ಬಳಸುವುದರ ಮೂಲಕ ಪ್ರಕಟನೆಯ ದೃಶ್ಯಗಳು ಮತ್ತು ಘಟನೆಗಳು ಸಾಂಕೇತಿಕ ಭಾಷೆಗಳಲ್ಲಿ ಅವನಿಗೆ ದರ್ಶನದ ಮೂಲಕ ತೋರಿಸಲ್ಪಟ್ಟವು ಎಂದು ಯೋಹಾನ ನಮಗೆ ಹೇಳುತ್ತಾನೆ. ಪವಿತ್ರಾತ್ಮನ ಮಾರ್ಗದರ್ಶನದಲ್ಲಿ ದರ್ಶನಗಳಲ್ಲಿ ತೋರಿಸಿದಂತೆ ಈ ಸಾಂಕೇತಿಕ ಭಾಷೆಗಳನ್ನು ಯೋಹಾನನು ನಂಬಿಗಸ್ತವಾಗಿ ದಾಖಲಿಸಿದ್ದಾನೆ (ಪ್ರಕಟನೆ 1:2).

ಆದ್ದರಿಂದ, ಪ್ರಕಟನೆಯ ಪ್ರವಾದನೆಗಳ ಬಹುತೇಕ ಭಾಗವನ್ನು ವಿವರಿಸಲು ವಾಸ್ತವ ಭಾಷೆಯಲ್ಲಿ ಅರ್ಥೈಸಬಾರದು. ನಿಯಮದಂತೆ ಸತ್ಯವೇದ ಓದುವುದು, ಸಾಮಾನ್ಯವಾಗಿ ಈ ವಾಕ್ಯದ ಒಂದು ವಾಸ್ತವ ಅರ್ಥವನ್ನು ಗ್ರಹಿಸಿಕೊಳ್ಳುವುದಾಗಿದೆ (ವಾಕ್ಯದ ಸಂಕೇತಗಳನ್ನು ಉದ್ದೇಶಿಸಿಲ್ಲದಿದ್ದರೆ). ಆದರೆ ನಾವು ಪ್ರಕಟನೆಯನ್ನು ಓದಿದಾಗ – ಈ ವಾಕ್ಯದ ಅರ್ಥವನ್ನು ಸೂಚಿಸದಿದ್ದರೆ ನಾವು ಅದನ್ನು ಸಾಂಕೇತಿಕವಾಗಿ ಅರ್ಥೈಸಿಕೊಳ್ಳಬೇಕು. ಪ್ರವಾದಿಸಿದ್ದ ದೃಶ್ಯಗಳು ಮತ್ತು ಘಟನೆಗಳು ನೈಜವಾಗಿದ್ದರೂ ಅವು ಸಾಮಾನ್ಯವಾಗಿ ಸಾಂಕೇತಿಕ ಭಾಷೆಯಲ್ಲಿ ವ್ಯಕ್ತಪಡಿಸಿದೆ.

ಪ್ರಕಟನೆಯು ಈ ಹೆಚ್ಚಿನ ಸಾಂಕೇತಿಕ ಪಾತ್ರವನ್ನು ಮನಸ್ಸಿನಲ್ಲಿಟ್ಟುಕೊಂಡು ಪ್ರವಾದನೆಯ ಸಂದೇಶವನ್ನು ವಿರೂಪಗೊಳಿಸುವುದರ ವಿರುದ್ಧ ನಮ್ಮನ್ನು ರಕ್ಷಿಸುತ್ತದೆ. ಈ ಪುಸ್ತಕದಲ್ಲಿ ಬಳಸಿದ ಚಿಹ್ನೆಗಳ ಅರ್ಥವನ್ನು ನಿಶ್ಚಯಿಸಲು ಪ್ರಯತ್ನಿಸುತ್ತಿರುವಾಗ ಮಾನವ ಕಲ್ಪನೆಯಿಂದ ಅಥವಾ ನಮ್ಮ ಸಂಸ್ಕೃತಿಯಲ್ಲಿ ಈ ಚಿಹ್ನೆಗಳ ಪ್ರಸ್ತುತ ಅರ್ಥಗಳನ್ನು ಮೂಲಪಾಠದ ಮೇಲೆ ಹೇರಲೇ ಬಾರದೆಂದು ನಾವು ಎಚ್ಚರಿಕೆ ವಹಿಸಬೇಕು. ಬದಲಾಗಿ, ಪ್ರಕಟನೆ ಪುಸ್ತಕದಲ್ಲಿನ ಚಿಹ್ನೆಗಳನ್ನು

ಅರ್ಥಮಾಡಿಕೊಳ್ಳಲು ಸತ್ಯವೇದ ಮತ್ತು ಅದರ ಪುಟಗಳಲ್ಲಿ ಕಂಡುಬರುವ ಚಿಹ್ನೆಗಳ ಕಡೆಗೆ ನಾವು ಹೋಗಬೇಕು.

ವಾಸ್ತವವಾಗಿ, ಪ್ರಕಟನೆಯಲ್ಲಿ ಚಿಹ್ನೆಗಳ ಅರ್ಥವನ್ನು ತೆಗೆಯಲು ಪ್ರಯತ್ನಿಸುವಾಗ, ಅವುಗಳಲ್ಲಿ ಹೆಚ್ಚಿನವು ಹಳೆಯ ಒಡಂಬಡಿಕೆಯಿಂದ ತೆಗೆದುಕೊಳ್ಳಲ್ಪಟ್ಟಿದೆ ಎಂದು ನಾವು ನೆನಪಿನಲ್ಲಿ ಇಟ್ಟುಕೊಳ್ಳಬೇಕು. ಭವಿಷ್ಯವನ್ನು ಭೂತಕಾಲದ ಭಾಷೆಯಲ್ಲಿ ಚಿತ್ರಿಸುವುದರ ಮೂಲಕ ದೇವರು ನಮ್ಮ ಮನಸ್ಸಿನ ಮೇಲೆ ಪ್ರಭಾವ ಬೀರಲು ಭವಿಷ್ಯದ ಆತನ ರಕ್ಷಣೆಯ ಕಾರ್ಯವು ಹಿಂದಿನ ರಕ್ಷಣೆಯ ಕಾರ್ಯದಂತೆಯೇ ಇರುತ್ತದೆ. ಅವರು ಹಿಂದೆ ತನ್ನ ಜನರಿಗೆ ಏನು ಮಾಡಿದರೋ ಅದನ್ನೇ ಭವಿಷ್ಯದಲ್ಲಿ ಅವರಿಗೆ ಮತ್ತೆ ಮಾಡುತ್ತಾನೆ. ಪ್ರಕಟನೆ ಚಿಹ್ನೆಗಳು ಮತ್ತು ಚಿತ್ರಗಳನ್ನು ಅನುವಾದ ಮಾಡುವ ಪ್ರಯತ್ನದಲ್ಲಿ ನಾವು ಹಳೇ ಒಡಂಬಡಿಕೆಗೆ ಗಮನಕೊಡುವುದರ ಮೂಲಕ ಪ್ರಾರಂಭಿಸಬೇಕು.

**ಬುಧವಾರ** **ಜನವರಿ, 2**

## ತ್ರೈಯೇಕತ್ವ

ಪೌಲನ ಪತ್ರಿಕೆಗಳಲ್ಲಿ ಕಂಡುಬರುವ ಸ್ವಾಗತದ ರೀತಿಯಂತೆ ಪ್ರಕಟನೆಯಲ್ಲಿಯೂ ಪ್ರಾರಂಭವಾಗುತ್ತದೆ. ಯೋಹಾನನ ದಿನಗಳಲ್ಲಿ ಈ ಪುಸ್ತಕವನ್ನು ಏಷ್ಯಾಮೈನರ್ ನಲ್ಲಿರುವ ಏಳು ಸಭೆಗಳಿಗೆ ಮೇಲ್ನೋಟಕ್ಕೆ ಪತ್ರವಾಗಿ ಕಳುಹಿಸಲಾಗಿದೆ. ಎಂದೆಂದಿಗೂ, ಪ್ರಕಟನೆ ಅವರಿಗೆ ಮಾತ್ರ ಬರೆಯಲಾಗಿಲ್ಲ. ಆದರೆ ಇತಿಹಾಸದುದ್ದಕ್ಕೂ ಇರುವ ಎಲ್ಲಾ ಕ್ರಿಸ್ತನ ಪೀಳಿಗೆಗೆ ಬರೆಯಲಾಗಿದೆ.

ಪ್ರಕಟನೆ 1:4, 5 ಮತ್ತು ರೋಮಾಪುರದವರಿಗೆ 1:7. ಈ ಎರಡು ವಾಕ್ಯಗಳಲ್ಲಿ ಯಾವ ಸಾಮಾನ್ಯ ಸ್ವಾಗತವು ಕಂಡುಬರುತ್ತದೆ ಮತ್ತು ಈ ಸ್ವಾಗತವನ್ನು ಯಾರಿಂದ ಪಡೆದಿದೆ?

ಅಕ್ಷರಗಳಿಗೆ ಸಂಬಂಧಿಸಿದ ಸ್ವಾಗತವನ್ನು ಎರಡು ಮೂಲಪದಗಳು ನೀಡುತ್ತದೆ. "ನಿಮಗೆ ಕೃಪೆಯೂ ಶಾಂತಿಯೂ ಆಗಲಿ". ಈ ನುಡಿಗಟ್ಟು 'ಚರಿಸ್' (ಕೃಪೆ) ಎಂಬ ಗ್ರೀಕ್ ಸ್ವಾಗತವನ್ನು ಮತ್ತು 'ಶಾಲೋಮ್' (ಶಾಂತಿ, ಒಳ್ಳೆಯದು)

ಎಂಬ ಇಬ್ರಿಯ ಸ್ವಾಗತಗಳನ್ನು ಒಳಗೊಂಡಿದೆ. ನಾವು ಈ ವಾಕ್ಯಗಳಿಂದ ನೋಡಿದರೆ, ಕೃಪೆ ಮತ್ತು ಶಾಂತಿಯನ್ನು ಕೊಡುವವರು ತ್ರೈಯೇಕತ್ವದ ಮೂರು ವ್ಯಕ್ತಿಗಳು. ತಂದೆಯಾದ ದೇವರು ಈ ಒಬ್ಬನೆಂದು ಗುರುತಿಸಲ್ಪಟ್ಟಿದ್ದಾನೆ. "ಯಾರು ಇರುವವನು ಮತ್ತು ಯಾರು ಇದ್ದವನು ಮತ್ತು ಯಾರು ಬರುವವನು" (ಪ್ರಕಟನೆ 1:8, ಪ್ರಕಟನೆ 4:8 ನೋಡಿ). ಈ ಹೆಸರು ಯೊಹೋವನ ದೈವೀಕ ಹೆಸರನ್ನು ಸೂಚಿಸುತ್ತದೆ. "ನಾನು ಯಾರೆಂಬುದು ನಾನು" (ವಿಮೋಚನಕಾಂಡ 3:14). ದೇವರು ಶಾಶ್ವತ ಅಸ್ತಿತ್ವವನ್ನು ಉಲ್ಲೇಖಿಸುತ್ತಿದ್ದಾನೆ.

ಪವಿತ್ರಾತ್ಮನು "ಏಳು ಆತ್ಮಗಳು" ಎಂದು ಉಲ್ಲೇಖಿಸಲಾಗುತ್ತದೆ (ಪ್ರಕಟನೆ 4:5 ಮತ್ತು ಪ್ರಕಟನೆ 5:6 ರನ್ನು ಹೋಲಿಸಿ ನೋಡಿ) ಸತ್ಯವೇದದಲ್ಲಿ, ಏಳು ಪರಿಪೂರ್ಣ ಸಂಖ್ಯೆಯಾಗಿದೆ. "ಏಳು ಆತ್ಮಗಳು' ಅಂದರೆ ಎಲ್ಲಾ ಏಳು ಸಭೆಗಳಲ್ಲಿ ಪವಿತ್ರಾತ್ಮನು ಸಕ್ರಿಯುವಾಗಿರುತ್ತಾನೆ. ಈ ಚಿತ್ರಣವು ಪವಿತ್ರಾತ್ಮನೇ ಸರ್ವವ್ಯಾಪಿಯೆಂದು ಉಲ್ಲೇಖಿಸುತ್ತದೆ ಮತ್ತು ಇತಿಹಾಸದ ಮೂಲಕ ದೇವ ಜನರ ಮಧ್ಯೆ ನಿರಂತರವಾದ ಕೆಲಸವನ್ನು ಸೂಚಿಸುತ್ತದೆ. ಆತನ ಕರೆಗಳನ್ನು ಪೂರೈಸಲು ಅನುವು ಮಾಡಿಕೊಡುತ್ತದೆ.

ಯೇಸುಕ್ರಿಸ್ತನನ್ನು ಮೂರು ಬಿರುದುಗಳಿಂದ ಗುರುತಿಸಲಾಗಿದೆ: "ನಂಬತಕ್ಕ ಸಾಕ್ಷಿಯೂ ಸತ್ತವರೊಳಗಿಂದ ಮೊದಲು ಎದ್ದು ಬಂದವನೂ, ಭೂರಾಜರ ಒಡೆಯನೂ" (ಪ್ರಕಟನೆ 1:5). ಅವು ಆತನ ಶಿಲುಬೆಯ ಮರಣ, ಆತನ ಪುನರುತ್ಥಾನ ಮತ್ತು ಪರಲೋಕದಲ್ಲಿ ಆತನ ಆಳ್ವಿಕೆಯನ್ನು ಉಲ್ಲೇಖಿಸುತ್ತದೆ. ಯೇಸು ಏನು ಮಾಡಿದರೆಂದು ಯೋಹಾನ ವಿವರಿಸುತ್ತಾನೆ : ಅವನು "ನಮ್ಮನ್ನು ಪ್ರೀತಿಸುವವನೂ ತನ್ನ ರಕ್ತದ ಮೂಲಕ ನಮ್ಮ ಪಾಪಗಳನ್ನು ತೊಳೆಯುವವನೂ ನಮ್ಮನ್ನು ರಾಜರನ್ನಾಗಿಯೂ ತನ್ನ ತಂದೆಯಾದ ದೇವರಿಗೆ ಯಾಜಕರನ್ನಾಗಿಯೂ ಮಾಡಿದನು" (ಪ್ರಕಟನೆ 1:5,6).

ಮೂಲ ಗ್ರೀಕ್‌ನಲ್ಲಿ ಅವನು "ನಮ್ಮನ್ನು ಪ್ರೀತಿಸುತ್ತಾನೆ" ಎಂದು ಹೇಳುವ ವಾಕ್ಯ ಕ್ರಿಸ್ತನ ನಡೆಯುತ್ತಿರುವ ಪ್ರೀತಿಯನ್ನು ಸೂಚಿಸುತ್ತದೆ. ಇದು ಭೂತ, ಭವಿಷ್ಯ ಮತ್ತು ವರ್ತಮಾನವನ್ನು ಅಂಗೀಕರಿಸುತ್ತದೆ. ನಮ್ಮನ್ನು ಪ್ರೀತಿಸುವವನು

ಆತನ ರಕ್ತದಿಂದ ನಮ್ಮನ್ನು ನಮ್ಮ ಪಾಪಗಳಿಂದ ಬಿಡುಗಡೆ ಮಾಡಿದ್ದಾನೆ. ಗ್ರೀಕ್‌ನಲ್ಲಿ "ಬಿಡುಗಡೆ" ಎಂಬ ಕ್ರಿಯಾ ಪದವು ಹಿಂದೆ ಪೂರ್ಣಗೊಂಡ ಕಾರ್ಯವನ್ನು ಸೂಚಿಸುತ್ತದೆ : ಯೇಸು ಶಿಲುಬೆಯ ಮೇಲೆ ಮರಣ ಹೊಂದಿದಾಗ ಅವನು ನಮ್ಮ ಪಾಪಗಳಿಗೆ ಪರಿಪೂರ್ಣ ಪ್ರಾಯಶ್ಚಿತ್ತವನ್ನು ಒದಗಿಸಿದ್ದಾನೆ.

**ಎಫೆಸದವರಿಗೆ 2:6 ಮತ್ತು ಫಿಲಿಪ್ಪಿಯವರಿಗೆ 3:20 ರಲ್ಲಿ ವಿಮೋಚಿಸಲ್ಪಟ್ಟ ಪರಲೋಕದ ಪ್ರಜೆಗಳಂತೆ ಎಬ್ಬಿಸಲ್ಪಟ್ಟು ಮತ್ತು ಕ್ರಿಸ್ತನ ಜೊತೆ ಪರಲೋಕ ಸ್ಥಳಗಳಲ್ಲಿ ಕುಳಿತುಕೊಳ್ಳುವಂತೆ ಮಾಡುತ್ತಾನೆಂದು ವಿವರಿಸುತ್ತದೆ. ಈ ವಾಕ್ಯಗಳು ಏನನ್ನು ಅರ್ಥೈಸಬಲ್ಲದು ಮತ್ತು ಈ ಪಾಪದ ಶಾಪಗ್ರಸ್ತ ಜಗತ್ತಿನಲ್ಲಿ ಈಗ ನಾವು "ರಾಜರು ಮತ್ತು ಯಾಜಕರು" (ಪ್ರಕಟನೆ 1:6) ಎಂದು ಕ್ರಿಸ್ತನಲ್ಲಿ ಈ ಅದ್ಭುತ ಸ್ಥಾನಮಾನವನ್ನು ಹೇಗೆ ಆನಂದಿಸುತ್ತೇವೆ? ನಾವು ಹೇಗೆ ಜೀವಿಸುತ್ತೇವೆ ಎಂದು ಈ ಉತ್ತರವು ಹೇಗೆ ಪ್ರಭಾವ ಬೀರಬೇಕು?**

**ಗುರುವಾರ** **ಜನವರಿ, 3**

## ಪ್ರಕಟನೆಯ ಪ್ರಮುಖ ಅಂಶ

ಪ್ರಕಟನೆಯ ಸಮಾಪ್ತಿಯು ಇಡೀ ಪುಸ್ತಕದ ನಿಜವಾದ ಗಮನವನ್ನು ತೋರಿಸುತ್ತದೆ. ಯೇಸು ಬಲದಿಂದಲೂ ಮತ್ತು ಮಹಿಮೆಯೊಡನೆ ಹಿಂತಿರುಗಿ ಬರುತ್ತಾರೆ. ಪುಸ್ತಕದ ಅಂತ್ಯದಲ್ಲಿ ಯೇಸು ತಿರುಗಿ ಬರುತ್ತಾನೆಂದು ವಾಗ್ದಾನ ಮೂರು ಬಾರಿ ಪುನರುಚ್ಚರಿಸಿದೆ (ಪ್ರಕಟನೆ 22:7, 12,20).

ಪ್ರಕಟನೆ 1:7, 8 ಓದಿ. ಈ ವಾಕ್ಯದ ಮಾತುಗಳು ಹಲವಾರು ಪ್ರವಾದಿತ ವಾಕ್ಯಗಳಿಂದ ಬಂದಿದೆ : ದಾನಿಯೇಲ 7:13, 14; ಜೆಕರ್ಯ 12:10; ಮತ್ತು ಮತ್ತಾಯ 24:30. ಎರಡನೇ ಬರೋಣದ ಖಚಿತತೆಯ ಬಗ್ಗೆ ಈ ವಾಕ್ಯಗಳು ನಮಗೆ ಏನು ಹೇಳುತ್ತದೆ?

ಪ್ರಕಟನೆಯಲ್ಲಿ ಕ್ರಿಸ್ತನ ಎರಡನೇ ಬರೋಣವು ಇತಿಹಾಸದ ಅಂತ್ಯದ ಕಡೆಗೆ ಚಲಿಸುತ್ತದೆ. ಎರಡನೇ ಬರೋಣವು ಈ ಲೋಕದ ಇತಿಹಾಸ ಅಂತ್ಯವನ್ನು ಗುರುತು ಮಾಡುತ್ತದೆ ಮತ್ತು ದೇವರ ಶಾಶ್ವತ ರಾಜ್ಯದ ಆರಂಭ ಹಾಗೂ ಎಲ್ಲಾ ದುಷ್ಟ, ದುಃಖ, ನೋವು ಮತ್ತು ಮರಣದಿಂದ ಸ್ವಾತಂತ್ರ್ಯಗೊಳಿಸುವುದು.

ಹೊಸ ಒಡಂಬಡಿಕೆಯ ಉಳಿದ ಎಲ್ಲಾ ವಾಕ್ಯದಂತೆ ಪ್ರಕಟನೆ 1:7 ರಲ್ಲಿ ಕ್ರಿಸ್ತನು ವಾಸ್ತವ, ಗೋಚರ ಮತ್ತು ವೈಯಕ್ತಿಕವಾಗಿ ಮಹಿಮೆಯೊಡನೆ ಹಾಗೂ ಪ್ರಭಾವದೊಡನೆ ಬರುತ್ತಾನೆ. ಈ ಭೂಮಿಯ ಮೇಲೆ ಜೀವಂತವಾಗಿ ಉಳಿದಿರುವ ಎಲ್ಲಾ ಮನುಷ್ಯರು ಅಲ್ಲದೆ ಆತನನ್ನು ಇರಿದವರು ಸಹ ಆತನ ಬರೋಣಕ್ಕೆ ಸಾಕ್ಷಿಯಾಗಿದ್ದಾರೆ. ಕ್ರಿಸ್ತನ ಪುನರಾಗಮನಕ್ಕೆ ಮುಂಚೆಯೇ, ಆತನನ್ನು ಶಿಲುಬೆಗೇರಿಸಿದವರನ್ನೂ ಒಳಗೊಂಡಂತೆ ಕೆಲವು ಜನರ ವಿಶೇಷ ಪುನರುತ್ಥಾನಕ್ಕೆ ಈ ಮಾತುಗಳು ಸೂಚಿಸುತ್ತವೆ. ಯೇಸು ತನ್ನ ಬರೋಣದಲ್ಲಿ ಆತನನ್ನು ಕಾಯುತ್ತಿರುವ ಜನರಿಗೆ ವಿಮೋಚನೆಯನ್ನು ನೀಡುತ್ತಾನೆ. ಆದರೂ ತನ್ನ ಕರುಣೆಯನ್ನು ಮತ್ತು ಪ್ರೀತಿಯನ್ನು ನಿರಾಕರಿಸಿದ ಭೂಮಿಯ ಮೇಲೆ ವಾಸಿಸುವ ನಿವಾಸಿಗಳಿಗೆ ಅವನು ನ್ಯಾಯತೀರ್ಪು ಬರಮಾಡುತ್ತಾನೆ.

ಕ್ರಿಸ್ತನ ಬರೋಣದ ನಿಶ್ಚಿತತೆಯು ಸಹ "ಹೌದು ಆಮೆನ್" ಎಂಬ ಪದಗಳೊಂದಿಗೆ ದೃಢೀಕರಿಸಲ್ಪಟ್ಟಿದೆ (ಪ್ರಕಟನೆ 1:7) "ಹಾಗೆಯೇ ಆಗುವುದು" ಎಂಬ ಪದವು ಗ್ರೀಕ್ "ನೈ" ಎಂಬ ಪದದ ಅನುವಾದವಾಗಿದೆ ಮತ್ತು "ಆಮೆನ್" ಒಂದು ಇಬ್ರಿಯ ದೃಢೀಕರಣವಾಗಿದೆ. ಒಟ್ಟಾಗಿ ಈ ಎರಡು ಪದಗಳು ನಿಶ್ಚಿತತೆಯನ್ನು ವ್ಯಕ್ತಪಡಿಸುತ್ತವೆ. ಅವರು ಈ ಪುಸ್ತಕವನ್ನು ಎರಡು ಸಮಾನ ರೂಪದ ದೃಢೀಕರಣದೊಂದಿಗೆ ಅಂತ್ಯಗೊಳಿಸುತ್ತಾರೆ (ಪ್ರಕಟನೆ 22:20 ನೋಡಿ).

"ರಕ್ಷಕನು ತನ್ನ ಬರೋಣದ ಭರವಸೆಯನ್ನು ನೀಡಿದಂದಿನಿಂದ ಹದಿನೆಂಟು ನೂರಕ್ಕಿಂತಲೂ ಅಧಿಕ ವರ್ಷಗಳು ಕಳೆದವು. ಶತಮಾನಗಳಿಂದಲೂ ಅವನ ಮಾತುಗಳು ಅವನ ನಂಬಿಗಸ್ತರ ಹೃದಯದಲ್ಲಿ ಧೈರ್ಯ ತುಂಬಿದೆ. ಆ ವಾಗ್ದಾನ ಇನ್ನೂ ನೆರವೇರಿಲ್ಲ. ಜೀವದಾಯಕನ ಧ್ವನಿಯು ಇನ್ನೂ ನಿದ್ರೆಹೋಗಿರುವ ಸಂತರನ್ನು ಸಮಾಧಿಯಿಂದ ಕರೆದಿಲ್ಲ; ಆದರೂ ಕೂಡ, ಹೇಳಿರುವ ಮಾತು ಖಚಿತವಾಗಿ ತನ್ನ ಕಾಲದಲ್ಲಿ ದೇವರು ಆತನ ಮಾತನ್ನು ಪೂರೈಸುವನು. ಈಗ ಯಾರಾದರೂ ಬೇಸತ್ತಿದ್ದೀರಾ? ನಾವು ಶಾಶ್ವತಲೋಕಕ್ಕೆ ಹತ್ತಿರವಾಗಿರುವಾಗ ನಮ್ಮ ನಂಬಿಕೆಯ ಮೇಲಿನ ಹಿಡಿತವನ್ನು ಕಳೆದುಕೊಳ್ಳುತ್ತೀವಾ? ನಗರವು ಒಂದು ಉತ್ತಮ ಮಾರ್ಗವಲ್ಲ ಎಂದು ಹೇಳುವರೆ? ಇಲ್ಲ, ಇಲ್ಲ. ಸ್ವಲ್ಪ ಸಮಯದಲ್ಲೇ ನಾವು ರಾಜನನ್ನು ಆತನ ಸೌಂದರ್ಯದಲ್ಲಿ ನೋಡುತ್ತೇವೆ.

ಸ್ವಲ್ಪ ಕಾಲದಲ್ಲೇ ಆತನ ನಮ್ಮ ಕಣ್ಣುಗಳಿಂದ ಕಣ್ಣೀರನ್ನು ಒರೆಸಿಬಿಡುವನು. ಸ್ವಲ್ಪ ಸಮಯದಲ್ಲೇ ಆತನ ಸಮ್ಮುಖದಲ್ಲಿ ನಮ್ಮನ್ನು ಆತನು ಮಿತಿಮೀರಿದ ಸಂತೋಷದ ಮಹಿಮೆಯೊಡನೆ ದೋಷವಿಲ್ಲದವರಾಗಿ ತೋರಿಸುತ್ತಾನೆ".

ಎಲೆನ್ ಜಿ ವೈಟ್ ದ ಅಡ್ವೆಂಟ್ ರಿವ್ಯೂ ಆಂಡ್ ಸಬಾಥ್ ಹೆರಾಲ್ಡ್, ನವೆಂಬರ್ 13, 1913.

ವ್ಯಕ್ತಿಯೊಬ್ಬನು ನೀಡುವ ಸಮಗ್ರತೆಯು ಒಂದು ಭರವಸೆಯ ಬಲವಾಗಿದೆ ಮತ್ತು ಅವನ ಅಥವಾ ಅವಳ ಸಾಮರ್ಥ್ಯದಿಂದ ಅದನ್ನು ನೆರವೇರಿಸಬಹುದು. ಎರಡನೇ ಬರೋಣದ ಭರವಸೆಯನ್ನು ದೇವರು ಕೊಟ್ಟಿದ್ದಾನೆ ಎನ್ನುವುದು ಹೇಗೆ, ಹಿಂದೆ ಎಲ್ಲಾ ಭರವಸೆಗಳನ್ನು ಉಳಿಸಿಕೊಂಡವರು ಯಾರು, ನಿಮಗೆ ಕ್ರಿಸ್ತನು ವಾಗ್ದಾನ ಮಾಡಿದಂತೆ ತಿರುಗಿ ಬರುವನೆಂಬ ಭರವಸೆಯನ್ನು ಒದಗಿಸಿದೆಯಾ?

**ಶುಕ್ರವಾರ** **ಜನವರಿ, 4**

**ಹೆಚ್ಚಿನ ಅಧ್ಯಯನ :** ಎಲೆನ್ ಜಿ ವೈಟ್ "ದಿ ಸ್ಟಡಿ ಆಫ್ ದಿ ಬುಕ್ಸ್ ಆಫ್ ಡ್ಯಾನಿಯಲ್ ಆಂಡ್ ರೆವೆಲ್ಯೂಸನ್ ಪುಟಗಳು 112–119, ಇನ್‌ಟೆಸ್ಟಮೋನಿ ಟೂ ಮಿನಿಸ್ಟರ್ಸ್ ಅಂಡ್ ಗಾಸ್ಪೆಲ್ ವರ್ಕರ್ಸ್, ಓದಿ.

ಪ್ರಕಟನೆಯ ದೈವೋಕ್ತಿಯನ್ನು ಕ್ರೈಸ್ತರ ಸಭೆಯಾದ್ಯಂತ ಮಾರ್ಗದರ್ಶನಕ್ಕಾಗಿ ಮತ್ತು ಸಮಾಧಾನಕ್ಕಾಗಿ ಕೊಡಲಾಗಿದೆ. ಪ್ರಕಟನೆಯ ಸ್ವಲ್ಪ ವಿಷಯ ಬಹಿರಂಗವಾಗಿದೆ. ಕರ್ತನು ತಾನೇ ತನ್ನ ಸೇವಕನಿಗೆ ಈ ಪುಸ್ತಕದಲ್ಲಿ ಒಳಗೊಂಡಿರುವ ರಹಸ್ಯಗಳನ್ನು ಬಹಿರಂಗಪಡಿಸಿದ್ದಾನೆ ಮತ್ತು ಎಲ್ಲರೂ ಅವನ ಸಂಕಲ್ಪವನ್ನು ಅಧ್ಯಯನ ಮಾಡಲು ಅವು ತೆರೆದಿರುತ್ತವೆ. ಇದರ ಸತ್ಯಗಳನ್ನು ಭೂಮಿಯ ಇತಿಹಾಸದ ಕೊನೆಯದಿನಗಳಲ್ಲಿ ವಾಸಿಸುವವರಿಗೆ ಮತ್ತು ಯೋಹಾನನ ದಿನಗಳಲ್ಲಿ ವಾಸಿಸುವವರಿಗೆ ತಿಳಿಸಲಾಗಿದೆ. ಈ ಪ್ರವಾದನೆಯಲ್ಲಿ ಚಿತ್ರಿಸಿದ್ದ ಕೆಲವು ದೃಶ್ಯಗಳು ಭೂತಕಾಲದಲ್ಲಿದೆ. ಕೆಲವು ಈಗ ನಡೆಯುತ್ತಿದೆ; ಸೈತಾನ ಮತ್ತು ಯೇಸುಕ್ರಿಸ್ತನ ನಡುವಿನ ಮಹಾಹೋರಾಟದ ಅಂತ್ಯವನ್ನು

ನೋಡಲು ತರುತ್ತದೆ ಮತ್ತು ಹೊಸದಾಗಿ ಸೃಷ್ಟಿಸಿದ ಭೂಮಿಯಲ್ಲಿ ಶಾಪವಿಮೋಚನೆಗೊಂಡವರ ಸಂತೋಷವನ್ನು ಮತ್ತು ವಿಜಯೋತ್ಸವವನ್ನು ಬಹಿರಂಗಪಡಿಸುತ್ತದೆ. ಯಾರೂ ಆಲೋಚಿಸಬಾರದು. ಏಕೆಂದರೆ ಪ್ರಕಟನೆಯಲ್ಲಿ ಪ್ರತಿ ಚಿಹ್ನೆಯ ಅರ್ಥವನ್ನು ಹೇಳಲು ಸಾಧ್ಯವಿಲ್ಲ. ಈ ಪುಸ್ತಕ ಹೊಂದಿರುವ ಆ ಸತ್ಯದ ಅರ್ಥವನ್ನು ತಿಳಿಯುವ ಅವರ ಪ್ರಯತ್ನ ಉಪಯೋಗವಿಲ್ಲದ್ದು. ಯೋಹಾನನಿಗೆ ರಹಸ್ಯಗಳನ್ನು ಬಹಿರಂಗಪಡಿಸಿದವರು ಸತ್ಯಕ್ಕಾಗಿ ಪರಿಶ್ರಮಪಟ್ಟು ಹುಡುಕುವವರಿಗೆ ಪರಲೋಕದ ವಿಷಯಗಳನ್ನು ನೀಡುತ್ತಾರೆ. ಸತ್ಯವನ್ನು ಅಂಗೀಕರಿಸುವುದಕ್ಕೆ ತೆರೆದಿರುವ ಅವರ ಹೃದಯವು ಅದು ಬೋಧಿಸುವುದನ್ನು ಅರ್ಥಮಾಡಿಕೊಳ್ಳಲು ನೆರವಾಗುತ್ತದೆ ಮತ್ತು ಈ ಪ್ರವಾದನೆಯ ಮಾತುಗಳನ್ನು ಕೇಳುವವರಿಗೆ ಮತ್ತು ಅದರಲ್ಲಿ ಬರೆದಿರುವಂಥವುಗಳನ್ನು ಇಟ್ಟುಕೊಂಡವರಿಗೆ ಭರವಸೆ ನೀಡಲಾಗುವುದು.

ಎಲೆನ್ ಜಿ ವೈಟ್, ದಿ ಆಕ್ಟ್ಸ್ ಆಫ್ ಅಪೋಸ್ಥಲ್ಸ್ ಪುಟಗಳು 583–585.

## ಚರ್ಚಿಸಬೇಕಾದ ಪ್ರಶ್ನೆಗಳು

1. ಪ್ರಕಟನೆಯು ಯೇಸುಕ್ರಿಸ್ತನನ್ನು ಅನಾವರಣಗೊಳಿಸಿದರೆ ಅಪೋಕ್ಯಾಲಿಪ್ಸ್ ಪದವು ಇಂದು ನಕಾರಾತ್ಮಕ ಅರ್ಥವನ್ನು ಏಕೆ ಹೊಂದಿದೆ? ಕ್ರೈಸ್ತರ ನಡುವೆ ಪ್ರಕಟನೆಯ ಜನಪ್ರಿಯ ಗ್ರಹಿಕೆ ಬಗ್ಗೆ ಈ ನಕಾರಾತ್ಮಕತೆ ಏನು ಹೇಳುತ್ತದೆ? 'ಭಯ' ಎಂಬ ಪದ ಸಾಮಾನ್ಯವಾಗಿ ಪ್ರಕಟನೆಗಳಿಗೆ ಸಂಬಂಧಿಸಿದೆ, ಏಕೆ?

2. ಕೆಲವು ಜನರು ಕಳೆದ 20 ವರ್ಷಗಳಲ್ಲಿ ಅಂತ್ಯಕಾಲದ ಘಟನೆಗಳು ಮತ್ತು ಯೇಸುವಿನ ಎರಡನೇ ಬರೋಣದ ಬಗ್ಗೆ ಮಾಡಿದ ವಿಫಲವಾದ ಭವಿಷ್ಯಗಳನ್ನು ಕುರಿತು ಯೋಚಿಸಿ ಅವುಗಳನ್ನು ಮಾಡುವ ವ್ಯಕ್ತಿಗಳ ಹೃದಯಗಳು ಮತ್ತು ಉದ್ದೇಶಗಳನ್ನು (ನಮಗೆ ಹೇಗಾದರೂ ತಿಳಿದಿಲ್ಲ) ಹೊರತುಪಡಿಸಿ, ಈ ವಿಫಲವಾದ ಭವಿಷ್ಯಗಳ ನಕಾರಾತ್ಮಕ ಫಲಿತಾಂಶಗಳು

ಯಾವುವು? ಆ ಭವಿಷ್ಯಗಳಲ್ಲಿ ನಂಬಿದವರನ್ನು ಅವರು ಹೇಗೆ ಭಾವಿಸುತ್ತಾರೆ? ಈ ವಿಫಲವಾದ ಭವಿಷ್ಯಗಳು ಸಾಮಾನ್ಯವಾಗಿ ಕ್ರೈಸ್ತರಲ್ಲಿ, ವಿಫಲವಾದ ಭವಿಷ್ಯಗಳನ್ನು ನೋಡುತ್ತಿರುವ ಹೊರಗಿನವರಿಗೆ ಹೇಗೆ ಕಾಣಿಸಿಕೊಳ್ಳುತ್ತವೆ? ಪ್ರವಾದನೆಯಲ್ಲಿನ ನಂಬಿಕೆ ಮತ್ತು ಅಂತ್ಯಕಾಲದ ಘಟನೆಗಳನ್ನು ದಾರಿಚಿಂತನೆಯಂತೆ ನೋಡುತ್ತಿರುವ ಜನರಾದ ನಾವು, ಪ್ರವಾದನೆಯ ಅರ್ಥವನ್ನು ಹೇಗೆ ಅರ್ಥಮಾಡಿಕೊಳ್ಳುತ್ತೇವೆ ಮತ್ತು ಇತರರಿಗೆ ಅದನ್ನು ಹೇಗೆ ಕಲಿಸುತ್ತೇವೆ ಎನ್ನುವುದರಲ್ಲಿ ನಾವು ಸರಿಯಾದ ಸಮತೋಲನವನ್ನು ಪ್ರಾರಂಭಿಸುವುದು ಹೇಗೆ?